ನಾರ್ಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/87/2016-17. ದಿನಾಂಕ:21-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಐ.ಎಂ.ವಿಜಯಕುಮಾರ ತಂದೆ ಲೇಟ್ ಐ.ಎಂ.ರುದ್ರಯ್ಯ 01 ನೇ ವಾರ್ಡ ಆಚಾರ್ಯ ಬಡಾವಣೆ ಹರಪನಹಳ್ಳಿ ಪಟ್ಟಣ (ತಾ) ದಾವಣಗೆರೆ (ಜಿ)<br>2)ಕೆ.ಶಾರದಮ್ಮ ಗಂಡ ಲೇಟ್ ಕೆ. ಬಸಪ್ಪ. ಕೆ.ಅಯ್ಯನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು | ಲಲಿತಮ್ಮ ಗಂಡ ನಾಗರಾಜ ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು |

ಕೂಡ್ಲಿಗಿ ತಾಲೂಕು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 278ಎ/1. 585ಎ. 668ಬಿ. ವಿಸ್ತೀರ್ಣ 0-77. 0-36. 0-42. ಸೆಂಟ್ಸು ಜಮೀನುಗಳನ್ನು ದಾನ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ.

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 278ಎ/1. 585ಎ. 668ಬಿ. ವಿಸ್ತೀರ್ಣ 0-77. 0-36. 0-42. ಸೆಂಟ್ಸು ಜಮೀನುಗಳನ್ನು ಸದರಿ ಗ್ರಾಮದ ಕೆ.ಶಾರದಮ್ಮ ಗಂಡ ಲೇಟ್ ಕೆ.ಬಸಪ್ಪ ಇವರಿಂದ ದಾವಣಗೆರೆ ಜಿಲ್ಲಾ ಹರಪನಹಳ್ಳಿ ಪಟ್ಟಣದ ಐ.ಎಂ.ವಿಜಯಕುಮಾರ ತಂದೆ ಲೇಟ್ ಐ.ಎಂ.ರುದ್ರಯ್ಯ ಇವರು ದಿನಾಂಕ 21-10-2015 ರ ಡಾಕ್ಯುಮೆಂಟ್ ನಂಬರ್: 2306/2015-16. ಪ್ರಕಾರ ದಾನ ಪತ್ರ ಬರೆಯಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳು ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕೆ.ಅಯ್ಯನಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 26-10-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಕೊಟ್ಟೂರು ಪಟ್ಟಣದ ಲಲಿತಮ್ಮ ಗಂಡ ನಾಗರಾಜ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 37/2015-16. ದಿನಾಂಕ 23-11-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 05-01-2016 ರಿಂದ 21-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಮತ್ತು ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 278ಎ/1. 585ಎ. 668ಬಿ. ವಿಸ್ತೀರ್ಣ 0-77. 0-36. 0-42. ಸೆಂಟ್ಸು ಜಮೀನುಗಳನ್ನು ನಮ್ಮ ಅಜ್ಜಿಯವರಾದ ಕೆ.ಶಾರದಮ್ಮ ಗಂಡ ಲೇಟ್ ಕೆ.ಬಸಪ್ಪ ಇವರು ನನ್ನ ಮೇಲಿನ ಪ್ರೀತಿ ವಿಶ್ವಾಸ ಮಮತೆಯಿಂದಲೂ ತನ್ನ ಹಕ್ಕು ಆದೀನ ಅನುಭವದಲ್ಲಿರುವ ಸದರಿ ಜಮೀನುಗಳನ್ನು ದಿನಾಂಕ

21-10-2015 ರ ಡಾಕ್ಯುಮೆಂಟ್ ನಂಬರ್:2306/2015-16 ರ ಪ್ರಕಾರ ನನ್ನ ಹೆಸರಲ್ಲಿ ದಾನ ಪತ್ರ ಬರೆಯಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಟ್ಟಿರುತ್ತಾರೆ. ಸದರಿ ದಾನ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನುಗಳು ಪ್ರತಿವಾದಿಗೆ ಸಂಬಂದಿಸಿದ ಜಮೀನುಗಳು ಆಗಿರುವ ಕಾರಣ ಸದರಿ ದಾನ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆ ಮತ್ತು ತಕರಾರುದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ತಕರಾರುದಾರರು ತಮ್ಮ ಹಕ್ಕನ್ನು ಸಾಬೀತು ಪಡಿಸುವ ಬಗ್ಗೆ ಯಾವುದೇ ದಾಖಲೆಗಳನ್ನು ನೀಡಲು ವಿಫಲರಾಗಿರುವ ಕಾರಣ ಅವರ ತಕರಾರು ಅರ್ಜಿಯನ್ನು ತಳ್ಳಿಹಾಕಿ ಕರ್ನಾಟಕ ಭೂಕಂದಾಯ ಕಾಯ್ದೇ 1964 ರ ಕಲಂ 128 ರ ಅಡಿಯಲ್ಲಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 278ಎ/1. 585ಎ. 668ಬಿ. ವಿಸ್ತೀರ್ಣ 0-77. 0-36. 0-42. ಸೆಂಟ್ಸು ಜಮೀನುಗಳನ್ನು ದಿನಾಂಕ 21-10-2015 ರ ಡಾಕ್ಯುಮೆಂಟ್ ನಂಬರ್: 2306/2015-16 ರ ದಾನ ಪತ್ರ ಪ್ರಕಾರ ಅರ್ಜಿದಾರರಾದ ಐ.ಎಂ.ವಿಜಯಕುಮಾರ ತಂದೆ ಲೇಟ್ ಐ.ಎಂ.ರುದ್ರಯ್ಯ. ಹರಪನಹಳ್ಳಿ ಪಟ್ಟಣ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 21-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಐ.ಎಂ.ವಿಜಯಕುಮಾರ ತಂದೆ ಲೇಟ್ ಐ.ಎಂ.ರುದ್ರಯ್ಯ. 01ನೇವಾರ್ಡ ಆಚಾರ್ಯ ಬಡಾವಣೆ ಹರಪನಹಳ್ಳಿ ಪಟ್ಟಣ. ದಾವಣಗೆರೆ ಜಿಲ್ಲಾ. ಕೆ.ಶಾರದಮ್ಮ ಗಂಡ ಲೇಟ್ ಕೆ.ಬಸಪ್ಪ. ಕೆ.ಅಯ್ಯನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಲಲಿತಮ್ಮ ಗಂಡ ನಾಗರಾಜ ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ರಮೇಶ ಆರ್.ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.

I. M. Vijaykumar
13/7/16